526 (810) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) :– ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ ತಾಲ್ಲೂಕಿನಲ್ಲಿ ಕಲ್ಲೊಡ್ಡುಹಳ್ಳ ಕೆರೆ ಯೋಜನೆಯನ್ನು ರದ್ದು ಪಡಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ಇದರಿಂದಾಗಿ ಸುಮಾರು 20–30 ಗ್ರಾಮಗಳು ಜಲಾವೃತವಾಗುವುದರಿಂದ ಸಾಗುವಳಿ ಭೂಮಿ ಹಾಗೂ ಅರಣ್ಯ ಪ್ರದೇಶ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಈ ಯೋಜನೆ ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಸದರಿ ಯೋಜನೆಯನ್ನು ರದ್ದುಪಡಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಆ) ಯೋಜನೆ ಕುರಿತಂತೆ ವಿವರವಾದ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ಇದು ಪೂರ್ಣಗೊಂಡ ನಂತರ ಪ್ರಸ್ತಾಪಿತ ಜಮೀನು/ಅರಣ್ಯ ಪ್ರದೇಶ ನಾಶವಾಗುವ ಬಗ್ಗೆ ತಿಳಿದು ಬರುತ್ತದೆ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

527 (992) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್. (ಹುಬ್ಬಳ್ಳಿ):– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಿ.ಹೆಚ್.ಡಿ ಮತ್ತು ಎಂ.ಫಿಲ್ ಆದವರ ಸಂಖ್ಯೆ ಎಷ್ಟು; ವಿಶ್ವವಿದ್ಯಾಲಯ ಪ್ರಕಾರ ವಿವರ ನೀಡುವುದು;

ಆ) ಪಿ.ಹೆಚ್.ಡಿ. ಮತ್ತು ಎಂ.ಫಿಲ್ ಪಡೆದವರು ನೌಕರಿಯ ಅವಕಾಶ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;

ಇ) ಪಿ.ಹೆಚ್.ಡಿ. ಎಂ.ಫಿಲ್, ಎಸ್.ಇ.ಟಿ/ಎಸ್ಎಲ್ಇಟಿ ಹೀಗೆ ಉನ್ನತ ಪದವಿ ಪಡೆದವರಿಗೆಲ್ಲರಿಗೂ ಪ್ರತಿ ತಿಂಗಳು ಗೌರವ ಮಾಸಾಶನ ನೀಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಈ) ಇದ್ದಲ್ಲಿ, ಯಾವ ವರ್ಷದಿಂದ ಪ್ರಾರಂಭಿಸಲಾಗುವುದು; .ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) ಪಿ.ಹೆಚ್.ಡಿ ಪದವಿ ಪಡೆದವರ ಸಂಖ್ಯೆ ಒಟ್ಟು = 4,997

ಎಂ.ಫಿಲ್ ಪದವಿ ಪಡೆದವರ ಸಂಖ್ಯೆ ಒಟ್ಟು = 1,872

ವಿಶ್ವವಿದ್ಯಾಲಯವಾರು ಮಾಹಿತಿ ಈ ಕೆಳಕಂಡಂತಿದೆ.

ಕ್ರ.ಸಂ.	ವಿಶ್ವವಿದ್ಯಾಲಯದ ಹೆಸರು	ಪಿ.ಹೆಚ್.ಡಿ ಆದವರ ಸಂಖ್ಯೆ	ಎಂ.ಫಿಲ್ ಆದವರ ಸಂಖ್ಯೆ
1	ಮೈಸೂರು ವಿಶ್ವವಿದ್ಯಾಲಯ (5 ವರ್ಷಗಳಲ್ಲಿ)	811	88
2	ಕರ್ನಾಟಕ ವಿಶ್ವವಿದ್ಯಾಲಯ (5 ವರ್ಷಗಳಲ್ಲಿ)	855	250
3	ಬೆಂಗಳೂರು ವಿಶ್ವವಿದ್ಯಾಲಯ (10 ವರ್ಷಗಳಲ್ಲಿ)	1133	---*
4	ಗುಲ್ಬರ್ಗಾ ವಿಶ್ವವಿದ್ಯಾಲಯ	887	803
5	ಮಂಗಳೂರು ವಿಶ್ವವಿದ್ಯಾಲಯ	729	389
6	ಕುವೆಂಪು ವಿಶ್ವವಿದ್ಯಾಲಯ	364	118
7	ಕನ್ನಡ ವಿಶ್ವವಿದ್ಯಾಲಯ (1995 ರಿಂದ 2007)	185	118
8	ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ	03	–

9	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ	29	106
	ಒಟ್ಟು	**4,997**	**1,872**

* 1998-99ನೇ ಶೈಕ್ಷಣಿಕ ಸಾಲಿನಿಂದ ಎಂ.ಫಿಲ್ ವಿದ್ಯಾಭ್ಯಾಸವನ್ನು ರದ್ದುಗೊಳಿಸಲಾಗಿದೆ.

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

529 (986) Sri. Ivan Nigli (Nominated) :- Hon'ble Minister for Rural water supply, Sanitation & Sugar requested to answer the following questions?

a) The number of Sugar factories in the State; The number of Sugar factories under the control of Government and Private Sugar factories;

b) The number of sick units and the reasons therefore (area wise details be furnished);

c) The action taken by the Government to restart these factories so as to help people of those areas;

d) Annual production of sugar in the State and the quantum of sugar being exported?

Sri S.A. Ravindranath (Minister for Rural Water Supply, Sanitation & Sugar) :

a) There are 55 sugar factories in the State. Sector wise breakup is given below.